

ಎರಡು ಸಲ ತನ್ನ ಐಷಾರಾಮಿ ಕಾರಿನಲ್ಲಿ ಬಂದು ಅಲ್ಲಿ ನಡೆಯುವ ಎಲ್ಲ ವಿದ್ಯಮಾನಗಳನ್ನೂ ನೋಡಿಕೊಂಡು ಹೋಗುವುದು ಆತನ ವಾಡಿಕೆ. ಅವನ ಆ ವ್ಯಾಪಾರದ ಸಂಪೂರ್ಣ ಉಸ್ತುವಾರಿ ನೋಡಿಕೊಳ್ಳಲು ನಾಯಿನಿಯತ್ತಿನ ಹಲವು ನೌಕರರಿದ್ದಾರೆ. ವ್ಯಾಪಾರ ಮಾತ್ರ ಭರ್ಜರಿಯಾಗಿಯೇ ಇದೆ.

ವಿಕಾಸಪುರದಿಂದ ನಲವತ್ತು ಐವತ್ತು ಮೈಲಿ ಪಾಸಲೆಯಲ್ಲಿ ಅನೇಕ ಹಳ್ಳಿಗಳಿವೆ. ಆ ಹಳ್ಳಿಗಳ ರೈತರಿಗೆ, 'ಅರೆ, ಕೃಷಿಯಲ್ಲೇನು ಲಾಭವಿದೆ ನಿಮಗೆ? ಕೋಳಿ ಸಾಕಾಣಿಕೆ ಮಾಡಿ ನೋಡಿ, ಕೈತುಂಬ ಹಣ ಎಣಿಸುತ್ತೀರಿ' ಎಂದು ಹವಾ ಹಾಕಿದ ಧರ್ಮಪ್ರಸಾದ್, ತನ್ನ ಮಾತಿಗೆ ಒಪ್ಪಿದ ಹಲವಾರು ರೈತರಿಗೆ ಹೈಟೆಕ್ ಕೋಳಿ ಫರ್ಮ್‌ಗಳನ್ನು ಕಟ್ಟಿಸಿ ಕೊಟ್ಟಿದ್ದಾನೆ. ಕೋಳಿ ಪಿಳ್ಳೆಗಳಿಂದ ಹಿಡಿದು, ಅವುಗಳಿಗೆ ಬೇಕಾಗುವ ಆಹಾರ, ಔಷಧ, ನೀರು, ವೈದ್ಯಕೀಯ ವ್ಯವಸ್ಥೆ-ಹೀಗೆ ಏನೆಲ್ಲ ಸವಲತ್ತುಗಳನ್ನೂ, ಇದು ಕಡಿಮೆಯಾಯ್ತು ಎನ್ನದ ಹಾಗೆ ಆತ ಪೂರೈಸುತ್ತಾನೆ. ರೈತರ ಕೆಲಸ, ನಿತ್ಯವೂ ಕಾಳು-ನೀರು-ನಿಡಿ ಹಾಕಿ ಅವುಗಳನ್ನು ಜೋಪಾನ ಮಾಡುವುದು ಮತ್ತು ರೋಗ-ರುಜಿನ ತಗುಲದಂತೆ ಎಚ್ಚರ ವಹಿಸುವುದು ಮಾತ್ರ. ಧರ್ಮಪ್ರಸಾದನಿಂದ ದೊರೆಯುವ ಎಲ್ಲ ಸೌಕರ್ಯಗಳನ್ನೂ ಉಪಯೋಗಿಸಿಕೊಂಡು, ತಮ್ಮ ಫರ್ಮ್‌ಗಳಲ್ಲಿನ ಕೋಳಿಗಳನ್ನು ದಷ್ಟಪುಷ್ಟವಾಗಿ ಬೆಳೆಸುತ್ತಾರೆ ರೈತರು. ಅವುಗಳಿಗೆ ನಿಗದಿತ ವಯಸ್ಸಾದ ತಕ್ಷಣ ಆತನೇ ಕಳಿಸುವ ಪಂಜರಸಹಿತವಿರುವ ಕಂಟೇನರ್ ಲಾರಿಗಳಲ್ಲಿ ತುಂಬಿ ವಿಕಾಸಪುರಕ್ಕೆ ಕಳಿಸಿದರೆ ಅವರ